ಎಂ.ವಿ.ಸಿ.14/2024,                ಪಿ.ಡಬ್ಲೂ-1        ಹೆಸರುಃ ಬೀರಪ್ಪ

**ದಿಃ15-10-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

ಅಪಘಾತ ಏರ್ಪಟ್ಟಾಗ ನಾನು ಬೈಕಿನಲ್ಲಿ ಹೋಗುತ್ತಿದ್ದೆನು. ಸದರಿ ಬೈಕು ನನ್ನ ಹೆಸರಿನಲ್ಲಿ ಇದೆ. ನನಗೆ ನನ್ನ ಬಳಿ ಚಾಲನಾ ಪರವಾನಗಿ ಇದ್ದು, ಸದರಿ ಚಾಲನಾ ಪರವಾನಗಿ ಕಳೆದುಹೋಗಿರುತ್ತದೆ. ನಾನು 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ಚಾಲನ ಪರವಾನಗಿಯನ್ನು ಅಜ್ಜಂಪುರದಲ್ಲಿ ಮಾಡಿಸಿದ್ದೆನು. ಅಜ್ಜಂಪುರದಲ್ಲಿ ಆರ್.ಟಿ.ಓ. ಕಛೇರಿ ಇಲ್ಲ, ಹಾಗಾಗಿ ನಾನು ಯಾವುದೇ ಚಾಲನಾ ಪರವಾನಗಿಯನ್ನು ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಲನೆ ಮಾಡುತ್ತಿದ್ದ ಮೋಟಾರ್ ಸೈಕಲ್‌ಗೆ ವಿಮೆ ಇತ್ತು. ಸದರಿ ವಿಮಾ ಪಾಲಿಸಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಲಾರಿಯ ಚಾಲಕನು ನನ್ನ ಬೈಕಿಗೆ ಗುದ್ದಿ ಅಪಘಾತ ಮಾಡಿರುತ್ತಾರೆ. ಅಪಘಾತವು ಕಡೂರು ಪೊಲೀಸ್ ಠಾಣೆಯ ಮುಂಬಾಗ ಆಗಿರುತ್ತದೆ. ಎದುರಿನಿಂದ ಬಂದು ಲಾರಿ ಚಾಲಕ ನನ್ನ ಮೋಟಾರ್ ಸೈಕಲ್‌ಗೆ ಡಿಕ್ಕಿಪಡಿಸಿರುತ್ತಾನೆ. ಅಪಘಾತಪಡಿಸಿದ ಲಾರಿ ಟಿಪ್ಪರ್ ಲಾರಿ ಆಗಿರುತ್ತದೆ. ಅಪಘಾತಪಡಿಸಿದ ಲಾರಿಯ ಸಂಖ್ಯೆ ಗೊತ್ತಿಲ್ಲ ಮತ್ತು ಲಾರಿಯ ಚಾಲಕನ ಹೆಸರು ಗೊತ್ತಿಲ್ಲ.

2. ಅಪಘಾತ ಏರ್ಪಟ್ಟ ರಸ್ತೆ ಟಾರು ರಸ್ತೆಯಾಗಿರತ್ತದೆ ಎಂದರೆ ಸರಿ. ಅಪಘಾತ ಏರ್ಪಟ್ಟಾಗ ನನ್ನ ಅಕ್ಕಪಕ್ಕದಲ್ಲಿ ಬೇರೆ ವಾಹನಗಳು ಇದ್ದ ಬಗ್ಗೆ ಗೊತ್ತಿಲ್ಲ. ಅಪಘಾತ ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನನ್ನು ಕಡೂರಿನ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಚಂದ್ರಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಕಡೂರಿನಲ್ಲಿ ಪ್ರಾಥಮಿಕ ಚಿಕಿತ್ಸೆಯನ್ನು ಪಡೆದುಕೊಂಡು ನಂತರ ಶಿವಮೊಗ್ಗಕ್ಕೆ ಹೋಗಿರುತ್ತೇನೆ. ಅಪಘಾತದ ನಂತರದಲ್ಲಿ ನನಗೆ 2-3 ದಿನಗಳ ಕಾಲ ಪ್ರಜ್ಞೆ ಇರಲಿಲ್ಲ. ನನಗೆ ಶಿವಮೊಗ್ಗದ ಚಂದ್ರಗಿರಿ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದಿರುತ್ತದೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ ಪೊಲೀಸರು ನನ್ನ ಬಳಿ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಇಲ್ಲಿಯವರೆಗೂ ಪೊಲೀಸರು ಅಪಘಾತದ ಕುರಿತು ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಅಪಘಾತದ ಕುರಿತು ನನ್ನ ತಂದೆ ದೂರನ್ನು ನೀಡಿರುತ್ತಾರೆ. ಅಪಘಾತ ಏರ್ಪಟ್ಟ 2 ದಿನಗಳ ನಂತರ ನನ್ನ ತಂದೆ ದೂರನ್ನು ನೀಡಿದ್ದಾರೆ ಎಂದರೆ ಸರಿ. ಅಪಘಾತದ ಕುರಿತು ಪರಿಹಾರವನ್ನು ಪಡೆಯಲು ನನ್ನ ತಂದೆ ಸುಳ್ಳು ದೂರನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

3. ಚಂದ್ರಗಿರಿ ಆಸ್ಪತ್ರೆಯಲ್ಲಿ ಒಂದುವರೆ ತಿಂಗಳ ಕಾಲ ಚಿಕಿತ್ಸೆಯನ್ನು ಪಡೆದಿರುತ್ತೇನೆ. ನಂತರ ನಾನು ಕಡೂರಿನಲ್ಲಿ ಮತ್ತು ಹೊಳಲ್ಕೆರೆಯ ಡಾ. ಮಂಜುನಾಥರವರ ಬಳಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಶಿವಮೊಗ್ಗದ ಚಂದ್ರಗಿರಿ ಆಸ್ಪತ್ರೆಗೆ ಎರಡು ತಿಂಗಳ ಹಿಂದೆ ಚಿಕಿತ್ಸೆಯನ್ನು ಪಡೆಯಲು ಹೋಗಿದ್ದೆನು. ನನಗೆ ಚಂದ್ರಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಿದ ವೈದ್ಯರು ಹೆಸರು ಗೊತ್ತಿಲ್ಲ. ನನಗೆ ಆಪರೇಷನ್ ಮಾಡಿಲ್ಲ. ಅಪಘಾತದಲ್ಲಿ ನನ್ನ ಹಣೆಗೆ, ಕಣ್ಣಿಗೆ, ಕುತ್ತಿಗೆಗೆ, ಸೊಂಟಕ್ಕೆ ಹಾಗೂ ಕಾಲಿಗೆ ಪೆಟ್ಟುಬಿದ್ದಿತು. ಅಪಘಾತದಲ್ಲಿ ನನ್ನ ಕಣ್ಣಿಗೆ ಪೆಟ್ಟಾಗಿತ್ತು. ಚಂದ್ರಗಿರಿ ಆಸ್ಪತ್ರೆಯಲ್ಲಿ ನನಗೆ ಒಬ್ಬರೆ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸರಿ. ಈಗಲೂ ಸಹ ಆ ವೈದ್ಯರು ಚಂದ್ರಗಿರಿ ಆಸ್ಪತ್ರೆಯಲ್ಲಿ ಇದ್ದಾರೆ ಎಂದರೆ ಸರಿ. ಹೊಳಲ್ಕೆರೆ ಆಸ್ಪತ್ರೆಗೆ ಎರಡುಭಾರಿ ಬಂದಿದ್ದೆನು. ಡಾ. ಮಂಜುನಾಥ್‌ರವರ ಖಾಸಗಿ ಕ್ಲೀನಿಕ್‌ನಲ್ಲಿ ಚಿಕಿತ್ಸೆ ಪಡೆದಿದ್ದೆನು. ಕ್ಷಾ ಕಿರಣವನ್ನು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ತೆಗೆದಿರುತ್ತಾರೆ. ಡಾ. ಮಂಜುನಾಥ್‌ರವರು ನನಗೆ ಚಿಕಿತ್ಸೆಯನ್ನು ನೀಡಿರುತ್ತಾರೆ, ಅದರೊಂದಿಗೆ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಡಾ. ಮಂಜುನಾಥ್‌ರವರು ಕ್ಲೀನಿಕ್‌ನಲ್ಲಿ ನೀಡಿರುವ ಚೀಟಿಗಳನ್ನು ಹಾಜರುಪಡಿಸಿಲ್ಲ. ಕಡೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಚಂದ್ರಗಿರಿ ಆಸ್ಪತ್ರೆಯ ವೈದ್ಯರಿಂದ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆದು ಹಾಜರುಪಡಿಸಲು ತೊಂದರೆ ಇಲ್ಲ. ಅಜ್ಜಂಪುರದಿಂದ ಶಿವಮೊಗ್ಗ ಒಂದೇ ರಸ್ತೆ ಇದ್ದು, ಹತ್ತಿರ ಇದೆ ಎಂದರೆ

ಸರಿ. ಅಜ್ಜಂಪುರದಿಂದ ಹೊಳಲ್ಕೆರೆಗೆ ಸುತ್ತಿಕೊಂಡು ಬರಬೇಕು ಎಂದರೆ ಸಾಕ್ಷಿ ಹತ್ತಿರ ಇದೆ ಎಂದು ಹೇಳುತ್ತಾರೆ. ಚಂದ್ರಗಿರಿ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡುವಂತೆ ಕೇಳಿಲ್ಲ. ಅಪಘಾತದ ಪೂರ್ವದಲ್ಲಿ ಇದ್ದಂತೆಯೇ ಈಗಲೂ ಸಹ ದೈಹಿಕವಾಗಿ ಸಮರ್ಥನಿದ್ದೇನೆ ಎಂದರೆ ಸರಿಯಲ್ಲ. ಡಾ. ಮಂಜುನಾಥ್‌ರವರ ಬಳಿ ಪರಿಹಾರವನ್ನು ಪಡೆಯುವ ಸಲುವಾಗಿ ಸುಳ್ಳು ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಪಡೆಯುವ ಸಲುವಾಗಿ ನಿಪಿ.19 ರಿಂದ 33ರವರೆಗಿನ ವೈದ್ಯಕೀಯ ಬಿಲ್ಲುಗಳನ್ನು, ಸಲಹಾ ಚೀಟಿಗಳನ್ನು, ಕ್ಷಾ ಕಿರಣಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ರೂ.10 ಲಕ್ಷ ಹಣವನ್ನು ವ್ಯಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಳಲ್ಕೆರೆಯಲ್ಲಿ ಕಣ್ಣಿನ ತಜ್ಞರಾದ ಡಾ.ಮಂಜುನಾಥ್‌ರವರ ಬಳಿ ಸಹ ಚಿಕಿತ್ಸೆ ಪಡೆದಿರುತ್ತೇನೆ. ಕಣ್ಣಿನ ವೈದ್ಯರ ಬಳಿ ಎರಡು ಭಾರಿ ಚಿಕಿತ್ಸೆಗಾಗಿ ಹೋಗಿದ್ದೆನು. ಕಣ್ಣಿನ ದೃಷ್ಟಿಯ ಕುರಿತು ಚಂದ್ರಗಿರಿ ಆಸ್ಪತ್ರೆರವರಿಂದ ನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಬರಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದಲೇ ಏರ್ಪಟ್ಟಿದ್ದು, ಆದಾಗ್ಯೂ ಪರಿಹಾರವನ್ನು ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ